# ಮಾತು-ಕತೆ

ಚಿತ್ರ ಬರೆಯಬೇಕು ಹೀಗೆ ಅರ್ಧಂಬರ್ಧ ಅನ್ನೋ ತರಹದ ಬಹುಮುಖ ಪ್ರತಿಭೆಗಳು ನನ್ನಲ್ಲಿದ್ದವು. ಎಲ್ಲದರಲ್ಲೂ ಪ್ರಯೋಗ ಮಾಡುತ್ತಿದ್ದೆ. ಆ ದಿನಗಳಲ್ಲಿ ಹೆಚ್ಚಿನ ಮನೋರಂಜನೆ ಇರುತ್ತಿರಲಿಲ್ಲ. ವರ್ಷಪೂರಾ ಏನಾದರೂ ವಿಶೇಷ ದಿನಗಳು ಬರುತ್ತವೇನೋ ಅಂತ ಕಾಯುತ್ತಿದ್ದೆವು. ಚಿಕ್ಕಂದಿನಲ್ಲಿ ನಾನು ನೋಡಿದ ಎಲ್ಲ ಮನೆಗಳಲ್ಲಿ ಪುಸ್ತಕಗಳಿರುತ್ತಿದ್ದವು. ತಲೆಮಾರುಗಳಿಂದ ತಲೆಮಾರುಗಳಿಗೆ ಕುಟುಂಬದ ಸದಸ್ಯರಿಗೆ ಆ ಸಂಗ್ರಹ ಹಸ್ತಾಂತರವಾಗುತ್ತಿತ್ತು. ಇದನ್ನು ಓದಿ ಇದನ್ನು ಓದಬೇಡಿ ಅಂತ ಯಾರೂ ಹೇಳುತ್ತಿರಲಿಲ್ಲ. ಅದು ಇದ್ದದ್ದೇ ಓದೋಕೆ ಅಂತ ನಾವು ಓದುತ್ತಿದ್ದೆವು, ಅಷ್ಟೇ.

◆ ನಿಮ್ಮ ಮೇಲೆ ಪ್ರಭಾವ ಬೀರಿದ ಪುಸ್ತಕಗಳು ಯಾವುವು?

ಅದನ್ನು ಹೇಳುವುದು ಕಷ್ಟ. ಒಂಥರ ಎಲ್ಲವೂ ಬೆರೆತು ಹೋಗಿದ್ದ ಸನ್ನಿವೇಶದಲ್ಲಿ ಬೆಳೆದೆ. ಹದಿಮೂರನೆಯ ವಯಸ್ಸಿಗೆ ಶೇಕ್ಸ್‌ಪಿಯರ್‌ನ ಸಾನೆಟ್‌ಗಳನ್ನು ಓದುತ್ತಿದ್ದೆ. ನಾನು ಓದಿದ ಉಳಿದೆಲ್ಲಕ್ಕಿಂತ ಅವು ನನ್ನನ್ನು ಹೆಚ್ಚು ಪ್ರಭಾವಿಸಿದ್ದವು. ಆಗ ಅವುಗಳ ಒಂದೊಂದು ಸಾಲೂ ನೆನಪಿತ್ತು. ಆಮೇಲೆ ಡಾಂಟೆಯ (ಇಟಲಿ ಕವಿ, ತತ್ತ್ವಶಾಸ್ತ್ರಜ್ಞ) ಮಹತ್ವದ ಕೃತಿಯನ್ನು ಓದಿದೆ. ಅದರಲ್ಲಿ ಗುಸ್ತಾವ್ ಡೊರೆ (ಫ್ರೆಂಚ್ ಚಿತ್ರಕಾರ) ಬರೆದ ಚಿತ್ರಗಳಿದ್ದವು. ರಂಗದ ಮೇಲೆ ನೋಡಿದ ನಾಟಕಗಳನ್ನು ಓದಿದೆ. ಹೋಮರ್ (ಗ್ರೀಕ್ ಮಹಾಕವಿ), ರಾನ್ಸಾರ್ಡ್ (ಫ್ರೆಂಚ್ ಕವಿ) ಹೀಗೆ ಎಲ್ಲ ಪ್ರಾಚೀನ ಫ್ರೆಂಚ್ ಕವಿಗಳ ಅನುವಾದವನ್ನು ಓದುತ್ತಿದ್ದೆ. ಬಹಳ ಚಿಕ್ಕವಯಸ್ಸಿನಲ್ಲಿಯೇ ಮೊಂಟೇನ್ (ಫ್ರೆಂಚ್ ತತ್ತ್ವಶಾಸ್ತ್ರಜ್ಞ) ನನ್ನನ್ನು ಬಹಳ ಪ್ರಭಾವಿಸಿದ್ದ. ನನಗೆ ಹದಿನಾಲ್ಕು ವರ್ಷಗಳಾದಾಗ ಒಂದು ದಿನ ನನ್ನಪ್ಪ ಪುಸ್ತಕಗಳ ಸಾಲೊಂದರ ಮುಂದೆ ನಿಲ್ಲಿಸಿ, "ನೀನ್ಯಾಕೆ ಇವನ್ನು ಓದಬಾರದು? ಇವು ನಿನ್ನ ದಡ್ಡತನವನ್ನು ಸ್ವಲ್ಪವಾದರೂ ಕಡಿಮೆಮಾಡಬಹುದು!" ಎಂದರು. ಅದು ವೋಲ್ಟೇರ್‌ನ (ಫ್ರೆಂಚ್ ಬರಹಗಾರ) ತತ್ತ್ವಶಾಸ್ತ್ರ ನಿಘಂಟುಗಳು. ಅದಕ್ಕೆ ಸ್ಮೊಲೆಟ್ (ಸ್ಕಾಟಿಷ್ ಕವಿ) ಟಿಪ್ಪಣಿಗಳನ್ನು ಬರೆದಿದ್ದ. ಐದು ವರ್ಷ ಸತತವಾಗಿ ಅದನ್ನು ಓದಿದೆ.





> ಜಗತ್ತಿನ ಉಳಿದೆಲ್ಲ ವೃತ್ತಿಗಳಂತೆ ಕಲೆ ಎನ್ನುವುದು ಕೂಡ ವೃತ್ತಿ. ನಿಜವಾದ ಕಲಾವಿದನಿಗೆ ಜಗತ್ತಿನಲ್ಲಿ ಅದು ಗಾಳಿ, ನೀರಿನಂತಲ್ಲದಿದ್ದರೂ ಊಟ ಮತ್ತು ನೀರಿನಂತೆ ಸಹಜವಾದದ್ದು. ನಾವು ಬಹಳ ಏಕತಾನತೆಯ ಬದುಕನ್ನು ಬದುಕುತ್ತಿದ್ದೇವೆ. ಏನಾದರೂ ಮಾಡಬೇಕು ಅಂದುಕೊಂಡಿದ್ದಲ್ಲಿ ಕೆಲವನ್ನು ಬಿಡಬೇಕಾಗುತ್ತದೆ.